**ಸಾಕ್ಷಿಯನ್ನು ದಿನಾಂಕ 07-04-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಹೆಚ್.ಪಿ.ಎನ್ ವಕೀಲರಿಂದಃ**

1. ನಿ.ಪಿ.–15 ಮತ್ತು 16 ರ ದಾಖಲೆಗಳು ದಾವಾ ಸ್ವತ್ತಿಗಳಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಜಮೀನಿನ ಸಂಬಂಧ ಯಾವುದೇ ವ್ಯವಹಾರ ನಡೆದಿದ್ದಲ್ಲಿ ಅದನ್ನು ನಮೂನೆ–15 ರಲ್ಲಿ ನಮೂದಿಸಲಾಗುತ್ತದೆ, ವ್ಯವಹಾರ ನಡೆಯದೆ ಇದ್ದ ಪಕ್ಷದಲ್ಲಿ ಅದನ್ನು ನಮೂನೆ–16 ರಲ್ಲಿ ನಮೂದಿಸಲಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ನಿ.ಪಿ.–15 ರ ದಾಖಲೆಯಲ್ಲಿ 1981–82, 1991, 1994 ರಲ್ಲಿ ನನ್ನ ತಂದೆ ಮಾರಾಟ ಮಾಡಿರುವ ವ್ಯವಹಾರದ ಸಂಬಂಧ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ ಹಲವರಿಗೆ ತಮ್ಮ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದ ಬಗ್ಗೆ ಉಲ್ಲೇಖ ಇರದ ನಿ.ಪಿ.–15 ರ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.–16 ರ ದಾಖಲೆ 01.04.2004 ರಿಂದ 08.11.2024 ರವರೆಗಿನ ಅವಧಿಗೆ ಸಂಬಂಧಪಟ್ಟಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಾನು ಮಾರಾಟ ಮಾಡಿರುವ ವ್ಯವಹಾರದ ಬಗ್ಗೆ ನಮೂದಾಗಿದೆ ಎಂದರೆ ಸರಿ.

2. ನಿ.ಪಿ.–17 ರ ದಾಖಲೆಯಲ್ಲಿ ಹಳೆ ಸರ್ವೆ ನಂಬರ್ 55 ಮಾತ್ರ ನಮೂದಿಸಲಾಗಿದೆ ಎಂದರೆ ಸರಿ. ಉದ್ದೇಶಪೂರಕವಾಗಿ ಹಳೆ ಸರ್ವೆ ನಂಬರ್ ನ್ನು ಸದರಿ ದಾಖಲೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.–18 ರಿಂದ 20 ರ ದಾಖಲೆಗಳಲ್ಲಿ ಉಪ ಸರ್ವೆ ನಂಬರ್ ಗಳನ್ನು

ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ಉಪ ಸರ್ವೆ ನಂಬರ್ ಗಳನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿ ವಿರುದ್ಧ ಯಾವ ಆಧಾರದಲ್ಲಿ ದಾವ ಹಾಕಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಅವರು ನಮಗೆ ಸೇರಿದ ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಸ್ವಾಧೀನ ಇದ್ದಾರೆ ಹಾಗಾಗಿ ದಾವೆ ದಾಖಲಿಸಿದ್ದೇನೆ. ಸದರಿ ಸ್ವತ್ತು ಪ್ರತಿವಾದಿಯ ಸ್ವಾಧೀನದಲ್ಲಿದ್ದರು ಸಹ ಬಿಲ್ಲವ ಸಮಾಜದ ಬ್ರಹ್ಮಶ್ರೀ ನಾರಾಯಣ ಗುರು ಸಂಘದವರಿಗೆ ಸದರಿ ಆಸ್ತಿ ಸೇರಿದೆ ಎಂದರೆ ಸರಿಯಲ್ಲ. ಸದರಿ ಸಂಘದ ಅಧ್ಯಕ್ಷರು ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಆರೋಪಿಸಿದಂತೆ ಪ್ರತಿವಾದಿ ನನಗೆ ಯಾವತ್ತು ಯಾವುದೇ ರೀತಿಯಲ್ಲೂ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

4. ಸರ್ವೆ ನಂಬರ್ 55 ರ ಸಂಬಂಧ ನಾನು ಈ ಹಿಂದೆ ಹಾಕಿದ್ದ ಹಲವು ದಾವೆಗಳು ವಜಾ ಆಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**